**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ. ಪಿ. ಕುಶಾಲಪ್ಪ (ಸುಜಾ) ಹಾಗೂ ಶ್ರೀ ಎಸ್. ಎಲ್. ಭೋಜೇಗೌಡ ಇವರು ಪ್ರಸ್ತಾಪಿಸಿರುವ ನಿಯಮ 330ರಡಿ ಗಮನ ಸೆಳೆಯುವ ಸೂಚನೆಗೆ ಉತ್ತರ**

**ವಿಷಯ:** **ವನ್ಯಜೀವಿ ಸಂರಕ್ಷಣಾ ಕಾಯ್ದೆ 1972 ರ ನಿಯಮ 40(1) ರಡಿ ಕಾಯ್ದೆ ಜಾರಿಗೆ ಬಂದು 52 ವರ್ಷಗಳ ನಂತರ ಈಗಿನ ಸರ್ಕಾರ ದಿನಾಂಕಃ 10-01-2024 ರಂದು ಸುತ್ತೋಲೆ ಹೊರಡಿಸಿರುವುದು ಮಲೆನಾಡು ಭಾಗದ ಜನರ ಭಾವನೆಗೆ ಧಕ್ಕೆ ಉಂಟಾಗಿರುವುದು ಮಾತ್ರವಲ್ಲದೇ, ಭ್ರಷ್ಟಾಚಾರಕ್ಕೆ ಎಡೆಮಾಡಿ ಕೊಟ್ಟಿರುವುದರೊಂದಿಗೆ, ಕೊಡುಗು ಜಿಲ್ಲೆಯೂ ಸೇರಿದಂತೆ ಅರಣ್ಯ ಭೂಮಿಗೆ ಹೊಂದಿಕೊಂಡಿರುವ ಪ್ರದೇಶಗಳಲ್ಲಿ ಜನರಿಗೆ ಮಾರಕವಾಗಿರುವ ಸದರಿ ಆದೇಶವನ್ನು ಹಿಂಪಡೆದು ಪರಿಷ್ಕೃತ ಆದೇಶ ಹೊರಡಿಸಲು ಕೋರಿ ಮಾನ್ಯ ಅರಣ್ಯ ಸಚಿವರಲ್ಲಿ ಪ್ರಸ್ತಾಪಿಸಲು ನಿಯಮ 330 ರಡಿ ಅವಕಾಶ ಕಲ್ಪಿಸುವಂತೆ ತಮ್ಮಲ್ಲಿ ಕೋರುತ್ತೇನೆ.**

*****

**ಉತ್ತರ:** ವನ್ಯಜೀವಿ (ಸಂರಕ್ಷಣಾ) ಅಧಿನಿಯಮ 1972 ನಿಯಮ 40 ರ ಉಪ-ವಿಭಾಗ (1) ಈ ಕೆಳಗಿನಂತಿದೆ.

- ಈ ಅಧಿನಿಯಮದ ಪ್ರಾರಂಭದಲ್ಲಿ ಅನುಸೂಚಿ 1 ರಲ್ಲಿ ನಿರ್ಧಿಷ್ಟಪಡಿಸಿರುವ ಸೆರೆಯಾದ ಪ್ರಾಣಿಯ ನಿಯಂತ್ರಣ, ಸ್ವಾಧೀನ ಅಥವಾ ವಶವನ್ನು ಹೊಂದಿದ್ದಲ್ಲಿ ಅಥವಾ ಪ್ರಾಣಿಗಳಿಂದ ತಯಾರಿಸಲ್ಪಟ್ಟ ವಸ್ತು, ಅಲಂಕಾರಿಕ ವಸ್ತು ಅಥವಾ (ಕಚ್ಚಾ ಅಲಂಕಾರಿಕ ವಸ್ತುಗಳನ್ನು) ಹೊಂದಿದ್ದಲ್ಲಿ ಅಥವಾ ಅಂತಹ ಪ್ರಾಣಿಯ ಕ್ಷಾರಯುಕ್ತ ಅಥವಾ ಒಣಚರ್ಮಗಳನ್ನು ಹೊಂದಿದ್ದಲ್ಲಿ, ಅಥವಾ ಕಸ್ತೂರಿ ಮೃಗದ ಕಸ್ತೂರಿಯನ್ನು ಹೊಂದಿದ್ದಲ್ಲಿ, ಅಥವಾ ಘೇಂಡಾಮೃಗದ ಕೊಂಬನ್ನು ಹೊಂದಿದ್ದಲ್ಲಿ **"ಈ ಅಧಿನಿಯಮದ ಪ್ರಾರಂಭದ 30 ದಿವಸದೊಳಗೆ ತನ್ನ ಸ್ವಾಧೀನದಲ್ಲಿರುವ ಮುಖ್ಯ ವನ್ಯಜೀವಿ ಪರಿಪಾಲಕರಿಗಾಗಲಿ ಅಥವಾ ಪ್ರಾಧಿಕೃತ ಅಧಿಕಾರಿಗಳಾಗಲಿ ಪ್ರಾಣಿಗಳ ಮತ್ತು ಅಥವಾ ಪ್ರಾಣಿಗಳಿಂದ ತಯಾರಿಸಲ್ಪಟ್ಟ ವಸ್ತುಗಳ ಸಂಖ್ಯೆ ಮತ್ತು ವಿವರಗಳನ್ನು ಮತ್ತು ಅವುಗಳನ್ನು ಇಟ್ಟಿರುವ ಸ್ಥಳಗಳ ವಿವರಗಳನ್ನು ಒದಗಿಸತಕ್ಕದ್ದು".**

- ವನ್ಯಜೀವಿ (ರಕ್ಷಣೆ) ಕಾಯ್ದೆ, 1972 ನ್ನು ಜಾರಿಗೊಳಿಸುವ ಸಮಯದಲ್ಲಿ ರಾಜ್ಯದ ಕೆಲವು ಜನರು ತಮ್ಮೊಂದಿಗೆ ವನ್ಯಜೀವಿ/ಪ್ರಾಣಿಗಳ ಅಂಗಾಂಗಗಳು, ಟ್ರೋಫಿಗಳು ಮತ್ತು ಸಂಸ್ಕರಿಸದ ಟ್ರೋಫಿಗಳನ್ನು ಹೊಂದಿರುತ್ತಾರೆ. ಮುಂದುವರೆದು ವನ್ಯಜೀವಿ ಸಂರಕ್ಷಣಾ ಕಾಯ್ದೆ 1972ನ್ನು ಜಾರಿಯಾದ 30-ದಿನಗಳ ಒಳಗೆ ಸದರಿ ಸೆಕ್ಷನ್ 40(1) ರ ಪ್ರಕಾರ, ವನ್ಯಜೀವಿ/ಪ್ರಾಣಿಗಳ ಅಂಗಾಂಗಗಳು, ಟ್ರೋಫಿಗಳು ಮತ್ತು ಸಂಸ್ಕರಿಸದ ಟ್ರೋಫಿಗಳನ್ನು ಹೊಂದಿರುವ ವ್ಯಕ್ತಿಯು ಘೋಷಿಸಿಕೊಂಡು ಮತ್ತು ಸಕ್ಷಮ ಪ್ರಾಧಿಕಾರದಿಂದ ಮಾಲೀಕತ್ವದ ಪ್ರಮಾಣ ಪತ್ರ ಪಡೆಯಲು ಕಾಲಾವಾಕಾಶವನ್ನು ನೀಡಲಾಗಿತ್ತು.

- ವನ್ಯಜೀವಿ (ರಕ್ಷಣೆ) (ಕರ್ನಾಟಕ ನಿಯಮಗಳು) 1973 ರ ನಿಯಮ 34 (1) ರ ಅಡಿಯಲ್ಲಿ ನಿಯಮ ಜಾರಿಯಾದ 30-ದಿನಗಳ ಒಳಗೆ ಅಂತಹ ಟ್ರೋಫಿಗಳನ್ನು ಹೊಂದಿರುವ ವ್ಯಕ್ತಿಯು ಘೋಷಿಸಿಕೊಂಡು ಮತ್ತು ಮಾಲೀಕತ್ವದ ಪ್ರಮಾಣಪತ್ರ ಪಡೆಯಲು ಸಹ ಕಾಲಾವಾಕಾಶವನ್ನು ನೀಡಲಾಗಿತ್ತು.

- 2003 ರಲ್ಲಿ ವನ್ಯಜೀವಿ ದಾಸ್ತಾನು ಘೋಷಣಾ ನಿಯಮಗಳು, 2003 ರನ್ವಯ 180-ದಿನಗಳ ಒಳಗೆ ವನ್ಯಜೀವಿ/ಪ್ರಾಣಿಗಳ ಅಂಗಾಂಗಗಳು, ಟ್ರೋಫಿಗಳು ಮತ್ತು ಸಂಸ್ಕರಿಸದ ಟ್ರೋಫಿಗಳನ್ನು ಹೊಂದಿರುವ ವ್ಯಕ್ತಿಯು ಅವುಗಳನ್ನು ಘೋಷಿಸಿಕೊಳ್ಳಲು ಕಾಲಾವಾಕಾಶವನ್ನು ನೀಡಲಾಗಿತ್ತು. ಈ ಕಾಯ್ದೆ/ನಿಯಮಗಳನ್ವಯ ಟ್ರೋಫಿಗಳನ್ನು ಘೋಷಿಸಿಕೊಂಡು ಮಾಲೀಕತ್ವದ ಪ್ರಮಾಣ ಪತ್ರ ಪಡೆದ ವ್ಯಕ್ತಿಗಳು ಅಂತಹ ಟ್ರೋಫಿಗಳನ್ನು ಹೊಂದಲು ಅವಕಾಶವಿರುತ್ತದೆ. ಸದರಿ 180 ದಿನಗಳ ಅವಧಿಯು ದಿನಾಂಕ: 17-10-2003 ಕ್ಕೆ ಮುಗಿದಿರುತ್ತದೆ. ನಂತರ ಕೇಂದ್ರ ಸರ್ಕಾರವು ಸಾರ್ವಜನಿಕರು ತಮ್ಮ ಸ್ವಾಧೀನದಲ್ಲಿರುವ ಅಥವಾ ಅಂಗಾಂಗ/ಟ್ರೋಫಿಗಳ ಸಣ್ಣ ಗಾತ್ರ ಅಥವಾ ಅಂಗಾಂಗ/ಟ್ರೋಫಿಗಳನ್ನು ಘೋಷಿಸಲು ಯಾವುದೇ ಅವಕಾಶ ನೀಡಿರುವುದಿಲ್ಲ.

- ರಾಜ್ಯ ಸರ್ಕಾರದ ಅಧಿಸೂಚನೆ ಸಂಖ್ಯೆ:ಅಪಜೀ.103.ಎಫ್‌ಡಬ್ಲ್ಯೂಎಲ್ 2023, ದಿನಾಂಕ: 10.01.2024 ರಲ್ಲಿ ವನ್ಯಜೀವಿ (ಸಂರಕ್ಷಣಾ) ಕಾಯ್ದೆ, 1972 ರ ಸೆಕ್ಷನ್ 64 ರನ್ವಯ ರಾಜ್ಯ ಸರ್ಕಾರಕ್ಕೆ ನೀಡಿರುವ ಅಧಿಕಾರದನ್ವಯ ಈ ಹಿಂದೆ ಒದಗಿಸಿದ ಅವಕಾಶಗಳಲ್ಲಿ ಅಂಗಾಂಗ ಮತ್ತು ಟ್ರೋಫಿಗಳ ಘೋಷಣೆಗಳನ್ನು ಮಾಡಿಕೊಂಡಿರದ ಜನರಿಗೆ ರಾಜ್ಯ ಸರ್ಕಾರದ ಆಸ್ತಿಯಾಗಿರುವ ವನ್ಯಜೀವಿ ಅಂಗಾಂಗ/ ಟ್ರೋಫಿಗಳನ್ನು ರಾಜ್ಯ ಸರ್ಕಾರಕ್ಕೆ ಅಧ್ಯರ್ಪಿಸಲು 90 ದಿನಗಳ ಅವಕಾಶವನ್ನು ಒದಗಿಸಲಾಗಿತ್ತು. ಸದರಿ ಅವಧಿಯು ದಿನಾಂಕ: 09.03.2024 ಕ್ಕೆ ಮುಕ್ತಾಯಗೊಂಡಿರುತ್ತದೆ. ಆದುದರಿಂದ ಸದರಿ ಆದೇಶವು ಪ್ರಸ್ತುತ ದಿನಾಂಕಕ್ಕೆ ಅನ್ವಯಿಸದೇ ಇರುವುದರಿಂದ ಹಿಂಪಡೆದು ಪರಿಷ್ಕೃತ ಆದೇಶ ಹೊರಡಿಸುವ ಅವಶ್ಯಕತೆ ಇರುವುದಿಲ್ಲ.

- ನಿಗದಿಪಡಿಸಿದ ಅವಧಿಯಲ್ಲಿ ರಾಜ್ಯದಲ್ಲಿ ವಿವಿಧ ವನ್ಯಜೀವಿ ಅಂಗಾಂಗ/ ಟ್ರೋಫಿಗಳನ್ನು ಹೊಂದಿದ್ದ 192 ಜನರು 705 ವನ್ಯಜೀವಿ ಅಂಗಾಂಗ/ ಟ್ರೋಫಿಗಳನ್ನು ಸರ್ಕಾರಕ್ಕೆ ಅಧ್ಯರ್ಪಿಸಿರುತ್ತಾರೆ.

- ರಾಜ್ಯ ಸರ್ಕಾರದ ಅಧಿಸೂಚನೆ ಸಂಖ್ಯೆ:ಅಪಜೀ. 103.ಎಫ್‌ಡಬ್ಲ್ಯೂಎಲ್ 2023, ದಿನಾಂಕ: 10.01.2024 ರ ಪ್ರಕಾರ ವನ್ಯಜೀವಿ ಅಂಗಾಂಗ/ ಟ್ರೋಫಿಗಳನ್ನು ರಾಜ್ಯ ಸರ್ಕಾರಕ್ಕೆ ಅಧ್ಯರ್ಪಿಸುವ ಅವಧಿಯು ಮುಗಿದಿರುವುದರಿಂದ ವನ್ಯಜೀವಿ ಅಂಗಾಂಗ/ ಟ್ರೋಫಿಗಳನ್ನು ಹೊಂದಿದ್ದಲ್ಲಿ ವನ್ಯಜೀವಿ (ಸಂರಕ್ಷಣಾ) ಕಾಯ್ದೆ ಪ್ರಕಾರ ಅಪರಾಧವಾಗಿರುತ್ತದೆ.

- ಪ್ರಸ್ತುತ ವನ್ಯಜೀವಿ ಅಂಗಾಂಗ/ ಟ್ರೋಫಿಗಳನ್ನು ಘೋಷಣೆ ಮಾಡುವ ಅಧಿಕಾರ ವ್ಯಾಪ್ತಿಯು ಕೇಂದ್ರ ಸರ್ಕಾರದ್ದಾಗಿರುತ್ತದೆ.

- ಪರಿಷ್ಕೃತ ವನ್ಯಜೀವಿ (ಸಂರಕ್ಷಣಾ) ಅಧಿನಿಯಮ 1972 ರನ್ವಯ ಹಲವಾರು ಪ್ರಭೇಧಗಳು ಷೆಡ್ಯೂಲ್ 1 ರಲ್ಲಿ ಸೇರ್ಪಡೆಗೊಂಡಿರುವುದರಿಂದ ಹಾಗೂ ವನ್ಯಜೀವಿ ಅಂಗಾಂಗ/ ಟ್ರೋಫಿಗಳನ್ನು ಈ ಹಿಂದೆ ಘೋಷಣೆ ಮಾಡಿರದೆ ಇರುವುದನ್ನು ಪರಿಗಣನೆಗೆ ತೆಗೆದುಕೊಂಡು ಒಂದು ಬಾರಿ ಅವಕಾಶ ನೀಡಿ, ನಿಯಮಗಳನ್ನು ರಚಿಸಲು ಕೇಂದ್ರ ಸರ್ಕಾರಕ್ಕೆ ಪತ್ರ ವ್ಯವಹರಿಸಲಾಗಿರುತ್ತದೆ.

- ರಾಜ್ಯ ಸರ್ಕಾರದ ಅಧಿಸೂಚನೆ ಸಂಖ್ಯೆ: ಅಪಜೀ. 103.ಎಫ್‌ಡಬ್ಲ್ಯೂಎಲ್ 2023, ದಿನಾಂಕ: 10.01.2024 ರ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 8380/2024 (connected 5199/2024) ದಾಖಲಾಗಿರುತ್ತದೆ. ಪ್ರಸ್ತುತ ಮಾನ್ಯ ಉಚ್ಚ ನ್ಯಾಯಾಲಯವು ಸದರಿ ಆದೇಶಕ್ಕೆ ತಡೆಯನ್ನು (Stay) ನೀಡಿರುತ್ತದೆ. ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣವು ಇತ್ಯರ್ಥಕ್ಕೆ ಬಾಕಿ ಇರುವುದರಿಂದ ಈ ಬಗ್ಗೆ ಯಾವುದೇ ಕ್ರಮಕೈಗೊಳ್ಳಲು ಅವಕಾಶವಿರುವುದಿಲ್ಲ.

**ಸಂಖ್ಯೆ: ಅಪಜೀ 45 ಎಫ್‌ಡಬ್ಲ್ಯೂಎಲ್ 2025**

**(ಈಶ್ವರ ಬಿ. ಖಂಡ್ರೆ)**
ಅರಣ್ಯ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು